# ಬಾಬಾ ಸಾಹೇಬ್ ಅಂಬೇಡ್ಕರ್: ಸಾಮಾಜಿಕ ನ್ಯಾಯದ ರೂವಾರಿ

ಅಶ್ವಿನಿ ಎಂ. ಎಸ್.

ಉಪನ್ಯಾಸಕರು, ಸಹ್ಯಾದ್ರಿ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು, ಶಿವಮೊಗ್ಗ.

DOI: https://doi.org/10.5281/zenodo.15504125

## ABSTRACT:

ಭಾರತ ಕಂಡ ಅತ್ಯಂತ ಶ್ರೇಷ್ಠ ಪ್ರತಿಭೆಗಳಲ್ಲಿ ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಅಗ್ರಮಾನ್ಯರು. ಅವರು ರಾಜಕೀಯ ತಜ್ಞರು, ಕಾನೂನು ತಜ್ಞರು, ಆರ್ಥಿಕ ಚಿಂತಕರು, ಸಾಮಾಜಿಕ ನ್ಯಾಯದ ಹೋರಾಟಗಾರರು, ತತ್ವಜ್ಞಾನಿಗಳು, ಲೇಖಕರು, ಬಹುಭಾಷ ವಿದ್ವಾಂಸರು, ಭಾರತ ರಾಷ್ಟ್ರದ ಮಹಾನ್ ನೇತಾರ, ಭಾರತದ ಶ್ರೇಷ್ಠ ಮಾನವತಾವಾದಿ, ಪ್ರಜಾತಂತ್ರ ಕಾರಣಿ ಮತ್ತು ಸಾಮಾಜಿಕ ಕ್ರಾಂತಿಕಾರಿ, ಅಮೆರಿಕದ ಕೊಲಂಬಿಯಾ ವಿಶ್ವವಿದ್ಯಾನಿಲಯದಿಂದ ಪದವಿ ಪಡೆದ ಮಹಾಜ್ಞಾನಿ ಹಾಗೂ ಭಾರತದ ಸಂವಿಧಾನ ರಚನ ಕರಡು ಸಮಿತಿಯ ಅಧ್ಯಕ್ಷರು. ಹೀಗೆ ಇವರ ಶ್ರೇಷ್ಠತೆಗಳನ್ನು ಪಟ್ಟಿ ಮಾಡುತ್ತಾ ಹೋದರೆ ಪಟ್ಟಿ ಬೆಳೆಯುತ್ತಾ ಹೋಗುತ್ತದೆ. ಇಂಥ ಶ್ರೇಷ್ಠ ವ್ಯಕ್ತಿ ಭಾರತದಲ್ಲಿದ್ದ ವರ್ಣ ವ್ಯವಸ್ಥೆಯ ವಿರುದ್ಧ ಹೋರಾಡಿ, ತಾನೇ ಸಂವಿಧಾನವನ್ನು ರಚಿಸಿ ಸಾಮಾಜಿಕ ನ್ಯಾಯವನ್ನು ನೀಡಿದ ಸಾಮಾಜಿಕ ಚಿಂತಕ ಎಂದರೆ ತಪ್ಪಾಗಲಾರದು.

ಭಾರತದಲ್ಲಿ ಮೊದಲು ವರ್ಣ ವ್ಯವಸ್ಥೆ ರೂಡಿಯಲ್ಲಿತ್ತು. ಅದು ಯಾವಾಗ ಯಾವ ಕಾರಣಗಳಿಂದ ಆರಂಭಗೊಂಡಿತು ಎಂದು ಹೇಳುವುದು ಕಷ್ಟ. ಏಕೆಂದರೆ ಯಾವುದೇ ಸಾಮಾಜಿಕ ವ್ಯವಸ್ಥೆಯ ಉಗಮದ ಬಗ್ಗೆ ಖಚಿತವಾಗಿ ಹೇಳಲು ಸಾಧ್ಯವಿಲ್ಲವಾದರೂ, ವೇದಗಳಿಂದಲೇ ವರ್ಣವಸ್ಥೆ ಆರಂಭವಾಗಿದೆ ಎನ್ನುವುದು ಬಹುಜನ ಒಪ್ಪಿತವಾದ. ಚಾತುರ್ವರ್ಣ ಎಂಬುದು ಹಿಂದೂ ಧರ್ಮದ ಒಂದು ಸಾಮಾಜಿಕ ವಿಭಜನಾ ವ್ಯವಸ್ಥೆ. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ಈ ವರ್ಣ ವ್ಯವಸ್ಥೆಯು ಪ್ರಾಚೀನ ಸಮಾಜದಲ್ಲಿ ಶ್ರಮ ವಿಭಜನೆ ತತ್ವದಲ್ಲಿ ರೂಪಿತವಾಗಿದೆ. ಅಧ್ಯಯನ ಅಧ್ಯಾಪನ ಯಜ್ಞ ಯಾಗಾದಿಗಳ ಕಾರಣದಿಂದ ಬ್ರಾಹ್ಮಣ, ರಾಜ ಆಡಳಿತ, ರಾಜ್ಯ ಸುಭಿಕ್ಷತೆಯ ಕಾರಣದಿಂದ ಕ್ಷತ್ರಿಯ, ವ್ಯಾಪಾರ ವ್ಯವಹಾರಗಳ ಕಾರಣದಿಂದ ವೈಶ್ಯ, ಕೃಷಿ ಮತ್ತು ಕೂಲಿಕಾರ್ಯಗಳು ಕಾರಣದಿಂದ ಶೂದ್ರ ಎಂದು ನಿರ್ವಹಿಸಿರುವ ಬಗೆಯನ್ನು ಕಾಣಬಹುದು. ಓದುವ ಕಾರಣದಿಂದ ಬ್ರಾಹ್ಮಣ ಮೇಲ್ವರ್ಗದವರಾಗಿ, ಕಾಯಕದ ಕಾರಣದಿಂದ ಶೂದ್ರ ಕೆಳ ವರ್ಗದವನಾಗಿ ಗುರುತಿಸಲ್ಪಡುತ್ತಿರುವುದು ದುರಾದೃಷ್ಟಕರ.

## KEYWORDS:

ಡಾ. ಬಾಬಾ ಸಾಹೇಬ್ ಅಂಬೇಡ್ಕರ್, ಅಸ್ಪೃಶ್ಯತೆ, ದಲಿತರು, ಸಾಮಾಜಿಕ ನ್ಯಾಯ, ಚಾತುರ್ವರ್ಣ ವ್ಯವಸ್ಥೆ ನಿರಾಕರಣೆ, ದಲಿತ ಪ್ರತಿನಿಧಿಕ ಚುನಾವಣೆ.

ವರ್ಣ ವ್ಯವಸ್ಥೆಯ ಕುರಿತು ಇ. ಎಂ. ನಂಬೂದಿರಿಪಾಡಿ ಯವರ ಒಂದು ವ್ಯಾಖ್ಯಾನವನ್ನು ನೋಡೋಣ: "ಸಾಮಾಜಿಕ ಮತ್ತು ಆರ್ಥಿಕ ಜೀವನವು ಹೆಚ್ಚು ಹೆಚ್ಚು ವಿಕಾಸಗೊಂಡಂತೆ ಬ್ರಾಹ್ಮಣರು, ಕ್ಷತ್ರಿಯರು ಮತ್ತು ವೈಶರೊಡನೆ ಹಂಚಲ್ಪಡುವ ಹೆಚ್ಚುವರಿ ಉತ್ಪಾದನೆಯ ಪ್ರಮಾಣ ಬೆಳೆಯುತ್ತ ಅದನ್ನು ಉತ್ಪಾದಿಸುವುದರಿಂದ ಶೂದ್ರ ಜಾತಿಯವರ ಶ್ರಮಭಾರವೂ ಬಹು ಮುಖ್ಯವಾಗಿ ಬೆಳೆದಾಗ ಜಾತಿಗಳ ಸಂಖ್ಯೆಯು ಅವುಗಳ ಅಸಮಾನತೆಯು ಹೆಚ್ಚಾಯಿತು" ಎಂದು ಹೇಳಿದ್ದಾರೆ.

ಅಸಮಾನತೆಗೆ ಅಸ್ಪೃಶ್ಯತೆ ಆಚರಣೆಗೆ ಕಾರಣವಾಗಿರಬಹುದು. ಹೀಗಾಗಿ ಅಸ್ಪೃಶ್ಯತೆಯು ಯಾವುದೇ ಸಮಾಜಕ್ಕೆ ಅಟ್ಟಿಕೊಂಡ ಬಹುದೊಡ್ಡ ಕಳಂಕವಾಗಿದೆ. ಅಂಬೇಡ್ಕರ್, ಬುದ್ಧ, ಬಸವ, ಫುಲೆ, ನಾರಾಯಣ ಗುರು, ಗಾಂಧಿ ಇತ್ಯಾದಿ ಸಾಮಾಜಿಕ ಪರಿವರ್ತಕರು ಅಸ್ಪೃಶ್ಯತೆ ಹೋಗಲಾಡಿಸಲು ಪ್ರಯತ್ನಿಸಿದರು. ಅಸ್ಪೃಶ್ಯತೆ ಎನ್ನುವುದು ಬರಿ ಮುಟ್ಟಿಗೆ ಮಾತ್ರ ಸೇರಿದ್ದಲ್ಲ, ಎಲ್ಲಿವರೆಗೆ ಜಾತಿ ಪ್ರಶ್ನೆ ಜೀವಂತವಾಗಿರುತ್ತದೆಯೋ ಅಲ್ಲಿವರೆಗೆ ಅಸ್ಪೃಶ್ಯತೆ ಎಲ್ಲಾ ಹಂತದಲ್ಲಿ ಉಳಿಯುತ್ತದೆ. ಹೀಗಾಗಿ ಬಾಬಾ ಸಾಹೇಬ್ ಅಂಬೇಡ್ಕರ್ ಅವರು ವೈದಿಕ ವ್ಯವಸ್ಥೆಯಲ್ಲಿ ಒಡೆದು ಹೋದ ಜನ ಬೌದ್ಧರಾದದ್ದು ಕೂಡ ಅವರನ್ನು ಅಸ್ಪೃಶ್ಯರೆಂದು ಪರಿಗಣಿಸಲು ಕಾರಣವಾಗಿದೆ ಎಂದು ವಾದಿಸುತ್ತಾರೆ.

1931ರ ಜನಗಣತಿಯಲ್ಲಿ ಬ್ರಿಟಿಷರು ಅಸ್ಪೃಶ್ಯರನ್ನು ಬಾಹ್ಯ ಜಾತಿಗಳು ಎಂದು ಕರೆದಿದ್ದಾರೆ. ಆದರೆ ಅಂಬೇಡ್ಕರ್ ರವರು 1950ರ ಸ್ವತಂತ್ರ ಭಾರತದ ಸಂವಿಧಾನದಲ್ಲಿಯೇ ಈ ವರ್ಗದ ಜನರಿಗೆ ಪರಿಶಿಷ್ಟ ಜಾತಿ ಎಂದು ಕರೆದರು. ಅಂಬೇಡ್ಕರ್ ಅವರು ಹೇಳುವಂತೆ ಹೊರಗಿನಿಂದ ಬಂದವರು, ಊರ ಹೊರಗಡೆ ನೆಲೆಸಿದವರು ಅಥವಾ ಊರಿನೊಳಗೆ ವಾಸಿಸುತ್ತಿದ್ದ ಜನರನ್ನು ಕೆಲವರು ಕಾರಣಗಳಿಂದ ಹೊರಗೆ ಅಟ್ಟಲ್ಪಟ್ಟವರು ಎಂದು ವಿಮರ್ಶಿಸಿದರೆ ಅಸ್ಪೃಶ್ಯತೆ ಆರಂಭ ಮತ್ತು ಅಸ್ಪೃಶ್ಯರು ಯಾರು ಎಂಬುದು ತಿಳಿದು ಬರುವುದು ಎಂದಿದ್ದಾರೆ.

ಜಾತಿ ಎಂಬುದು ಒಂದು ಪರಿವೇಷ್ಟಿತ ವರ್ಗ. ಜ್ಯೋತಿ ಪದ್ಧತಿಯು ದೈವ ನಿಯಮಕವಾದ ಒಂದು ನ್ಯಾಯ ನಿಬಂಧನೆಗಾಗಿ ಭಾರತದ ಮುಗ್ಧ ಜನರ ಮೇಲೆ ಹೇರಲ್ಪಟ್ಟ ಸಾಮಾಜಿಕ ಸ್ತರವದು. ರೂಢಿಗಳೇ ನಂಬಿಕೆಯಾಗಿ ಜಾತಿ ತನ್ನ ಅಸ್ಪೃಶ್ಯತೆಯನ್ನು ಉಳಿಸಿಕೊಂಡಿದೆ ಎಂಬ ಅಭಿಪ್ರಾಯಕ್ಕೆ ಡಾ. ಬಿಆರ್ ಅಂಬೇಡ್ಕರ್ ಅವರು ಬರುತ್ತಾರೆ. ಹೀಗಾಗಿ ಹಾಸ್ಟೆಲ್ ಸುತ್ತ ಜಾತಿ ನಿವಾರಣೆಗಾಗಿ ಹೋರಾಟವನ್ನು ಆರಂಭಿಸುತ್ತಾರೆ. ಅಂಬೇಡ್ಕರ್ ಆಧುನಿಕ ದಲಿತ ಸಂವೇದನೆಯ ಸಮರ್ಥ ಪ್ರತಿನಿಧಿಯಾಗಿ, ಭಾರತೀಯ ಸಮಾಜದಲ್ಲಿ ಕಂಡು ಬಂದ ಅಸ್ಪೃಶ್ಯತಾ ಜಾತಿ ಸಮಸ್ಯೆಗಳಿಗೆ ರಾಷ್ಟ್ರ ಅಂತರಾಷ್ಟ್ರೀಯ ಮಟ್ಟದ ಗಮನವನ್ನು ಸೇಳೆದರು. ಭಾರತದ

ಮೂಲ ನಿವಾಸಿಗಳು ಬುಡಕಟ್ಟು ಜನರು. ಭಾರತಕ್ಕೆ ಆರ್ಯರ ಮತ್ತು ದ್ರಾವಿಡರ ಆಗಮನವಾಯಿತು. ದ್ರವಿಡಿಯನ್ನರ ಆಗಮನದಿಂದ ಬಹುದೊಡ್ಡ ಬದಲಾವಣೆ ಬುಡಕಟ್ಟು ಜನರಲ್ಲಾಗಲಿಲ್ಲ ಆದರೆ ಆರ್ಯರ ಆಗಮನದಿಂದ ಭಾರತದ ಮೂಲ ನಿವಾಸಿಗಳು ಬುಡುಕಟ್ಟಿನ ಜನರ ಬದುಕಿನಲ್ಲಿ ಬಹುದೊಡ್ಡ ಬದಲಾವಣೆ ಆಯಿತು ಎನ್ನುವ ವಾದವೊಂದಿದೆ.

ಆರ್ಯರು ಬುಡಕಟ್ಟು ಮತ್ತು ಇತರ ವರ್ಗಗಳಿಗಿಂತ ಹೆಚ್ಚುಗಾರಿಕೆಯನ್ನು ಮೆರೆಸಲು ಪುರೋಹಿತ ವರ್ಗವಾಗಿ ಉನ್ನತಿ ಕರೆಸಿಕೊಂಡದ್ದು, ಜಾತಿ ಉಗಮಕ್ಕೆ ಕಾರಣವಾಯಿತು ಎನ್ನುವ ಅಭಿಮತವಿದೆ. ಹೀಗಾಗಿ ಭಾರತದಲ್ಲಿ ಮೊಟ್ಟಮೊದಲ ಬಾರಿಗೆ ಬ್ರಾಹ್ಮಣ ಬ್ರಾಹ್ಮಣೇತರ ಜಾತಿಗಳು ಪರಿವರ್ತನೆಗೊಂಡವು.

ಹೀಗೆ ಹೊಸ ಹೊಸ ಜಾತಿಗಳು ಹುಟ್ಟಿಕೊಂಡು ಭಾರತಗಳಿಗೆ ಸುಮಾರು 6324 ಜಾತಿಗಳಿವೆ ಎಂದು ಗುರುತಿಸಲಾಯಿತು. ಆದ್ದರಿಂದ ಜಾತಿ ಭಾರತದ ಸರ್ವತೋಮುಖ ಅಭಿವೃದ್ಧಿಗೆ ಬಹುದೊಡ್ಡ ತೊಡಕು ಆಯಿತು. ಒಂದು ರಾಷ್ಟ್ರದ ಸಂಪನ್ಮೂಲ ಆ ರಾಷ್ಟ್ರದ ಎಲ್ಲಾ ಸಮುದಾಯಗಳಿಗೆ ಸಮಾನವಾಗಿ ಹಂಚಲ್ಪಟ್ಟಾಗ ದೇಶದ ಏಳಿಗೆ ಸಾಧ್ಯವಾಗುತ್ತದೆ. ಭಾರತದ ಅಸಮಾನ ರಾಜಕೀಯ, ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕ ತೊಡಕುಗಳನ್ನ ನಿವಾರಿಸಿಕೊಳ್ಳದ ಹೊರತು ದೇಶದ ರಾಜಕೀಯ ಸುಧಾರಣೆ ಇಲ್ಲ. ಭಾರತದ ಸಮಾಜೋ ಧಾರ್ಮಿಕ ಚಳುವಳಿಯ ಸುಧಾರಕರನ್ನು ಹೊರತುಪಡಿಸಿದರೆ ಭಾರತದಲ್ಲಿ ಜಾತ್ಯತೀತ ನೆಲೆಯಲ್ಲಿ ಆಲೋಚನೆ ಮಾಡುವವರು ತುಂಬಾ ವಿರಳ.

ಜಾತಿಯು ನಮ್ಮನ್ನು ನೀತಿ ಭ್ರಷ್ಟರನ್ನಾಗಿ ಮಾಡಿದೆ. ಜಾತಿ ಸಾಮಾಜಿಕ ನೀತಿ ನಿಯಮಗಳನ್ನು ನಾಶಗೊಳಿಸಿದೆ. ಅತ್ಯಂತ ಸಂಕೋಚಿತ ವ್ಯವಸ್ಥೆಯಾದ ಜಾತಿಯು ಮನುಷ್ಯ ನು ಹೃದಯ ವೈಶಾಲ್ಯತೆಯಿಂದ ಬೆಳೆಯಲು ಅವಕಾಶ ಮಾಡಿಕೊಳ್ಳುವುದಿಲ್ಲ. ಕನಿಷ್ಠ ಪಕ್ಷ ಈ ವ್ಯವಸ್ಥೆಯು ಒಂದು ಜಾತಿಯ ವ್ಯಕ್ತಿ ಇತರ ಜಾತಿಯ ವ್ಯಕ್ತಿಯ ಕಷ್ಟ ಸುಖಗಳಲ್ಲಿ ಭಾಗಿಯಾಗಲು ಬಿಡುವುದಿಲ್ಲ. ಒಬ್ಬ ವ್ಯಕ್ತಿಯ ನಿಷ್ಠೆ ಏನಿದ್ದರೂ ತಮ್ಮ ತಮ್ಮ ಜಾತಿಯವರಿಗೆ ಮಾತ್ರ. ಪ್ರೇರಣೆ, ಪ್ರೋತ್ಸಾಹ, ಹೊಗಳಿಕೆ, ಮೆಚ್ಚುಗೆ ಹೀಗೆ ಏನೇ ಇದ್ದರೂ ಜಾತಿಯೊಳಗೆ ಆಗಬೇಕು. ಅವನು ದ್ರೋಹಿಯೋ, ಭ್ರಷ್ಟಾಚಾರಿಯೋ ಮತ್ತು ದುಷ್ಟನು ಆಗಿದ್ದರು ಅಷ್ಟೇ ಅಲ್ಲ ದೇಶದ್ರೋಹ ಮಾಡಿದರು ಜಾತಿಯವನು ಎಂಬ ಕಾರಣಕ್ಕೆ ಸಹಿಸಿಕೊಳ್ಳುತ್ತಾರೆ.

ಹೀಗಾಗಿ ಜಾತಿಯು ನಮ್ಮನ್ನು ನೀತಿ ಭ್ರಷ್ಟನಾಗಿ ಮಾಡಿದೆ. ಜಾತಿ ಸಾಮಾಜಿಕ ನೀತಿ ನಿಯಮಗಳನ್ನು ನಾಶಪಡಿಸಿದೆ. "ನೀವು ಯಾವ ದಾರಿಗಾದರೂ ಹೋಗಿ, ಜಾತಿವೆಂಬ ರಾಕ್ಷಸ ನಿಮ್ಮನ್ನು ಅಡ್ಡಗಟ್ಟುತ್ತಾನೆ. ಈ ರಾಕ್ಷಸನನ್ನು ಸಂಹರಿಸಿದ

ಹೊರತು, ನಿಮಗೆ ಆರ್ಥಿಕ ಮತ್ತು ರಾಜಕೀಯ ಸುಧಾರಣೆ ಇಲ್ಲ'' ಎಂಬ ಅಂಬೇಡ್ಕರ್ ಅವರ ಮಾತು ಪ್ರಸ್ತುತ ಕಾಲಕ್ಕೆ ಸತ್ಯವಾದುದ್ದಾಗಿದೆ. ಯಾವುದೇ ಸಮಾಜ ಅಥವಾ ಸಮುದಾಯ ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ ಗಳೆಂಬ ಆದರ್ಶಗಳ ಮೇಲೆ ನಿರ್ಮಾಣವಾಗಬೇಕು ಎಂಬುದು ಡಾಕ್ಟರ್ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಅಭಿಮತ. ಜಾತಿ ನಿವಾರಣೆಗೆ ಅಂತರ್ಜಾತಿ ವಿವಾಹ ಮತ್ತು ಸಹಪಂಕ್ತಿ ಭೋಜನಗಳು ಮೊದಲ ಹೆಜ್ಜೆಗಳು ಎಂದು ಭಾವಿಸಲಾಗಿತ್ತು. ಇವುಗಳಿಂದ ಜಾತಿಯ ಭಾವನೆಯ ತೀವ್ರತೆಯು ಸ್ವಲ್ಪ ಆದ್ರೂ ಕಡಿಮೆಯಾಗಬಹುದು ಎಂಬ ಆಶಾವಾದವಾಗಿತ್ತು.

ಭಾರತವು ಪ್ರಜಾಸತ್ತಾತ್ಮಕ ಮತ್ತು ಜಾತ್ಯತೀತ ಗಣರಾಜ್ಯ, ಒಕ್ಕೂಟ ವ್ಯವಸ್ಥೆಯಾಗಿ ಒಂದು ಪ್ರದೇಶದ ವ್ಯಾಪ್ತಿಯಲ್ಲಿ ಜೀವಿಸುವ ಅವರೆಲ್ಲರೂ ಅಣ್ಣ ತಮ್ಮರೆಂದು ಭಾವಿಸಿಕೊಂಡಾಗ ಪ್ರಜಾಪ್ರಭುತ್ವದ ಪರಿಕಲ್ಪನೆ ಪೂರ್ಣಗೊಳ್ಳುತ್ತದೆ. ಪ್ರಜಾಪ್ರಭುತ್ವ ಒಂದು ಬಗೆಯ ರಾಜಕೀಯ ಆಡಳಿತ ವಿಧಾನ ಮಾತ್ರವಲ್ಲ ಮೂಲತಃ ಅದೊಂದು ಸಾಮಾಜಿಕ ಜೀವನ ವಿಧಾನವೂ ಹೌದು. ಹೀಗಾಗಿ ಪ್ರತಿಯೊಬ್ಬ ಭಾರತೀಯನೂ ಸಾಮಾಜಿಕ ನ್ಯಾಯವನ್ನು ಪಡೆಯುವ ಹಕ್ಕು ಹೊಂದಿರುತ್ತಾನೆ. ಹೀಗೆ ಪ್ರತಿಯೊಬ್ಬ ವ್ಯಕ್ತಿಗೆ ತನ್ನ ವಾಕ್ ಸ್ವಾತಂತ್ರ್ಯವನ್ನ, ಶಿಕ್ಷಣದ ಹಕ್ಕನ್ನ, ಧಾರ್ಮಿಕ ಹಕ್ಕನ್ನ, ರಾಜಕೀಯ ಹಕ್ಕನ್ನ ಮತ್ತು ಸಾಮಾಜಿಕತೆಯ ಹಕ್ಕನ್ನು ಸಂವಿಧಾನದ ನಿಯಮಗಳ ಅಡಿಯಲ್ಲಿ ಬಾಬಾ ಸಾಹೇಬರು ಒದಗಿಸಿಕೊಟ್ಟಿದ್ದಾರೆ.

19ನೇ ಶತಮಾನ ಭಾರತೀಯರ ಸಮಾಜದ ಪರಿವರ್ತನೆ ದೃಷ್ಟಿಯಿಂದ ಅತ್ಯಂತ ಮಹತ್ವದ ಕಾಲ. ಬ್ರಿಟಿಷರು ಭಾರತದಲ್ಲಿ ತಮ್ಮ ಆಡಳಿತ ಪ್ರಾರಂಭಿಸಿ ಅನೇಕ ಬದಲಾವಣೆಗಳನ್ನು ತಂದರು. ಆರ್ಥಿಕ, ಶೈಕ್ಷಣಿಕ, ಸಾಮಾಜಿಕ ಅಭಿವೃದ್ಧಿಗೆ ಹಲವಾರು ಯೋಜನೆಗಳನ್ನು ರೂಪಿಸಿದರು. ಜಾತೀಯತೆ, ಮೇಲು–ಕೀಳು, ಸ್ಪೃಶ್ಯ ಅಸ್ಪೃಶ್ಯ ಭೇದಭಾವಗಳನ್ನ ಅಳಿಸು ಹಾಕಲು ಶ್ರಮಿಸಿದರು. ಅಕ್ಷರದ ಅರಿವಿಲ್ಲದ ಜನರಿಗೆ ಕೋ ಎಜುಕೇಶನ್ ಪದ್ಧತಿಯನ್ನು ರೂಢಿಗೆ ತಂದರು. ಜಾತಿ ಭೇದವನ್ನು ಮಾಡದೆ ಎಲ್ಲರಿಗೂ ಸಮಾನ ಶಿಕ್ಷಣವನ್ನು ಕೊಡಲು ಪ್ರಾರಂಭಿಸಿದರು. ನಗರಗಳಿಂದ ಗ್ರಾಮಗಳ ವರೆಗೆ ಶಾಲೆಗಳನ್ನು ತೆರೆದರು. ಇದರಿಂದ ವರ್ಣ ಆಧಾರದ ಮೇಲೆ ಬ್ರಾಹ್ಮಣರಿಗೆ ಬೋಧನೆ, ಕ್ಷತ್ರಿಯರಿಗೆ ಯುದ್ಧ ಮಾಡುವ ಕಲೆ, ವೈಶ್ಯರಿಗೆ ವ್ಯಾಪಾರ ಮಾಡುವುದನ್ನು ಕಲ್ಪಿಸಲಾಗುತ್ತಿತ್ತು. ಆದರೆ ಅಸ್ಪೃಶ್ಯರಿಗೆ ಯಾವುದೇ ಬಗ್ಗೆ ಶಿಕ್ಷಣ ನಿಷಿದ್ಧವಿತ್ತು.

ಶಿಕ್ಷಣ ಬದುಕಿನ ಬೆಳಕು. ಇಂತಹ ಶಿಕ್ಷಣದಿಂದ ಬಹು ಸಮುದಾಯಗಳು ಬೆಳಕು ಕಂಡವು. ಇವತ್ತಿಗೂ ಬದುಕಿನ ಬೆಳಕನ್ನು ಕಾಣಲು ಸದಾ ಪ್ರಯತ್ನಿಸುತ್ತಿವೆ.

ಈ ಪ್ರಯತ್ನಗಳಿಗೆ ಪ್ರೇರಣೆಯನ್ನು ನೀಡಿದವರು ಬ್ರಿಟಿಷರಾಧಿಯಾಗಿ ಸಮಾಜೋ ಧಾರ್ಮಿಕ ಚಳುವಳಿಯ ಭಾರತೀಯರು ಸಮಾಜ ಸುಧಾರಕರುಗಳು. ರಾಜಾರಾಮ್ ಮೋಹನ್ ರಾಯ್, ದಯಾನಂದ ಸರಸ್ವತಿ, ಮಹಾತ್ಮ ಜ್ಯೋತಿ ಬಾಪುಲೆ, ಶ್ರೀ ನಾರಾಯಣ ಗುರು, ಶಹೂ ಮಹಾರಾಜ್, ಕುದ್ಮಲ್ ರಂಗರಾವ್, ಪೆರಿಯಾರ್ ರಾಮಸ್ವಾಮಿ ಅಯ್ಯರ್ ಮತ್ತು ನಾಲ್ವಡಿ ಕೃಷ್ಣರಾಜ ಒಡೆಯರ್ ಮೊದಲಾದವರು.

ಶತಮಾನಗಳ ಕಾಲ ಬ್ರಿಟಿಷರು ಆಳಿದ ಭಾರತಕ್ಕೆ ಭಾರತೀಯರಿಂದಲೇ ಆಳಲ್ಪಡುವ ಅವಕಾಶ ಲಭಿಸಿತು. ಅದುವೇ ಭಾರತದ ಸ್ವಾತಂತ್ರ್ಯ ಸಂಗ್ರಾಮ. ಹೀಗಾಗಿ ಸ್ವಾತಂತ್ರ ಹೋರಾಟವೆಂದರೆ ಕೇವಲ ಬ್ರಿಟಿಷರನ್ನು ಹೊರಗಟ್ಟಿ, ಸ್ವರಾಜ್ಯ ಸಂಪಾದನೆಗಾಗಿ ಹೋರಾಡುತ್ತಲೇ ನಮ್ಮ ಸಾಮಾಜಿಕ ಧಾರ್ಮಿಕ ಬದುಕಿನಲ್ಲಿ ಸೇರಿಕೊಂಡಿದ್ದ ಅನಿಷ್ಟಗಳನ್ನು ನಿವಾರಿಸಬೇಕಿತ್ತು. ಸ್ತ್ರೀಶೋಷಣೆ, ಅಸ್ಪೃಶ್ಯತೆ, ಅಸಮಾನತೆ, ಶಿಕ್ಷಣದ ನಿರಾಕರಣೆ, ಸತಿ ಪದ್ಧತಿ, ಬಾಲ್ಯ ವಿವಾಹ ಮತ್ತು ವಿಧವ ಕೇಶ ಮುಂಡನ ದಂತ ಕ್ರೂರ ಕಟ್ಟುಪಾಡುಗಳಿಂದ ಭಾರತ ಹೊರಬರುವ ಧಾವಂತದಲ್ಲಿತ್ತು.

ಹೀಗಾಗಿ ಮಹಾತ್ಮ ಜ್ಯೋತಿಬಾ ಪುಲೆ ಯವರು ಮಹಿಳೆಯರ ಶಿಕ್ಷಣಕ್ಕಾಗಿ 1848ರಲ್ಲಿ ಪುಣೆಯಲ್ಲಿ ಹೆಣ್ಣು ಮಕ್ಕಳಿಗಾಗಿ ದೇಶದ ಮೊಟ್ಟಮೊದಲ ಶಾಲೆಯನ್ನು ತೆರೆದರು. ಕೂದ್ಮಲ್ ರಂಗರಾವ್ ರವರು 1892 ರಲ್ಲಿ ದಲಿತರಿಗಾಗಿ ಒಂದು ಶಾಲೆಯನ್ನು ಆರಂಭಿಸಿದರು. ಹೀಗಾಗಿ ಇವರನ್ನು ಪಂಚಮ ಶಾಲೆಗಳ ಸ್ಥಾಪಕರೆಂದು ಕರೆಯುವರು. ಹಾಗೆ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಅಸಮಾನತೆಯ ನಿವಾರಿಸಿ ಸಾಮಾಜಿಕ ಸಾಮರಸ್ಯವನ್ನು ಸ್ಥಾಪಿಸುವ ಕನಸು ಕಂಡರು. ಅಜ್ಞಾನದಲ್ಲಿ ಮುಳುಗಿದ್ದ ಸಮಾಜವನ್ನು ಎಚ್ಚರಿಸಿ, ಅಸ್ಪೃಶ್ಯತೆ ನೋವಿಗೊಳಗಾಗಿ ಬಳಲುತ್ತಿರುವ ಸಮಾಜವನ್ನು ಈ ನೋವಿನಿಂದ ಪಾರು ಮಾಡುವುದೇ ಡಾಕ್ಟರ್ ಬಾಬಾ ಸಾಹೇಬ್ ಅವರ ಜೀವನದ ಉದ್ದೇಶವಾಗಿತ್ತು.

ಸಮಾನತೆಗಾಗಿ ಹೋರಾಟ ನಡೆಸುವ ಮೂಲಕ ಹಾಗೂ ಸಂವಿಧಾನ ರಚನಾ ಸಭೆಯ ಮೂಲಕ ಸಮಾನತೆಯ ಕಾನೂನು ರೂಪಿಸಿ ಪರಿಹಾರವನ್ನು ಕಂಡುಕೊಳ್ಳುವ ಮಾರ್ಗದಲ್ಲಿ ಕಾರ್ಯ ಪ್ರವೃತ್ತರಾದರು. ಈ ಕಾರಣದಿಂದಲೇ ಡಾಕ್ಟರ್ ಬಾಬಾ ಸಾಹೇಬ್ ಅಂಬೇಡ್ಕರ್ ಸರ್ವೋಚ್ಚ ಶ್ರೇಷ್ಠ ರಾಷ್ಟ್ರ ನಾಯಕ. ಅವರ ಆಚಾರ ಹೋರಾಟ ಬೋಧನೆಗಳೆಲ್ಲವೂ ಈ ರಾಷ್ಟ್ರದ ಅವಕಾಶ ವಂಚಿತ ಪ್ರತಿಯೊಬ್ಬ ವ್ಯಕ್ತಿಯ ಬಿಡುಗಡೆಯಾಗಿತ್ತು.

ಭಾರತದ ಸಾಮಾಜಿಕ ವ್ಯವಸ್ಥೆಯ ಜಾತಿ ಪದ್ಧತಿ ಮತ್ತು ಅಸ್ಪೃಶ್ಯತೆ ಎಂಬ ಗುಣವಾಗದ ಮರಣಾಂತಿಕ ರೋಗಕ್ಕೆ ಸಂವಿಧಾನದ ಮೂಲಕ ಸೂಕ್ತ ಚಿಕಿತ್ಸೆ ನೀಡಲು

ಪ್ರಯತ್ನಿಸಿದರು. ಅಸ್ಪೃಶ್ಯರಿಗೆ ಶಿಕ್ಷಣ, ಉದ್ಯೋಗ, ಸಮಾನ ಬದುಕುವ ಹಕ್ಕು, ಧಾರ್ಮಿಕ ಸಾಮಾಜಿಕ ಆರ್ಥಿಕ ಬಿಡುಗಡೆಯ ಆಶಯವು ಅವರದಾಗಿತ್ತು. ಬಾಬಾ ಸಾಹೇಬರು ಅಸ್ಪೃಶ್ಯ ಒಬ್ಬನ ಕಣ್ಣಿನಲ್ಲಿ ಸ್ವಾತಂತ್ರ್ಯ ಎಂದರೇನು? ಎಂಬುದನ್ನ ಮನವರಿಕೆ ಮಾಡಿಕೊಡಲು ನಡೆಸಿದ ಹೋರಾಟಕ್ಕೆ ಬೆಲೆ ಕಟ್ಟಲಾಗದು. ಮಹಾಡ್ ನ ಚವ್ದಾರ್ ಕೆರೆಯ ನೀರನ್ನು ಕುಡಿಯಲು ಮಾಡಿದ ಸತ್ಯಾಗ್ರಹ ಬಹಳ ಮುಖ್ಯವಾದದ್ದು. ದೇಗುಲಗಳ ಪ್ರವೇಶಕ್ಕಾಗಿ ಸತ್ಯಾಗ್ರಹ ಆರಂಭಿಸಿದ್ದು. ನಿಮ್ಮ ನಿಜವಾದ ಸಮಸ್ಯೆ ಕಾಲಾರಾಂ ದೇವಸ್ಥಾನದ ಪ್ರವೇಶದಿಂದ ಕೊನೆಗೊಳ್ಳುವುದಿಲ್ಲ ಎಂದು ಹೇಳಿ, ಅಸ್ಪೃಶ್ಯತೆ ನೋವನ್ನು ಸ್ವತಃ ಅನುಭವಿಸಿ, ಆ ನೋವಿನಿಂದ ತನ್ನ ಸಮುದಾಯವನ್ನು ಹೊರ ತರುವ ಶಪಥದೊಂದಿಗೆ ಹಗಲಿರಳು ಕಾರ್ಯಪ್ರವೃತ್ತರಾಗಿದ್ದರು.

ಹೀಗೆ ಭಾರತೀಯ ಸಮಾಜದಲ್ಲಿ ದಲಿತರನ್ನು ಅತ್ಯಂತ ಹೀನವಾಗಿ ಕಾಣಲಾಗುತ್ತಿತ್ತು. ಸಾರ್ವಜನಿಕ ದೇವಾಲಯವನ್ನು ಅವರು ಪ್ರವೇಶಿಸುವಂತಿರಲಿಲ್ಲ. ಕೆರೆಕಟ್ಟೆಗಳ ನೀರನ್ನು ಮುಟ್ಟುವಂತಿರಲಿಲ್ಲ. ಕೃಷಿಯನ್ನು ಮಾಡುವಂತಿರಲಿಲ್ಲ. ಅವರಿಗೆ ಅವರದೇ ಆದ ಸ್ವಂತ ವಸ್ತುಗಳನ್ನು ಇಟ್ಟುಕೊಳ್ಳುವಂತಿರಲಿಲ್ಲ. ರಸ್ತೆಗಳಲ್ಲಿ ನಿರ್ಭಯದಿಂದ ಓಡಾಡುವಂತಿರಲಿಲ್ಲ. ಓದು ಕಲಿಕೆಗೆ ಮೊದಲೇ ಅವಕಾಶ ಇರಲಿಲ್ಲ ಇಂತಹ ಅನಿಷ್ಠಗಳನ್ನ ಪರಿವರ್ತನೆ ಹಾದಿಗೆ ತಂದವರು ಡಾ. ಬಿ ಆರ್ ಅಂಬೇಡ್ಕರ್ ರವರು, ಮನುಷ್ಯ ಮೂಲಕ ದುರ್ಬಲರಿಗೆ, ಅಸ್ಪೃಶ್ಯರಿಗೆ ವಿಶೇಷ ಸೌಲಭ್ಯವನ್ನು ಕೊಟ್ಟು ಅವರನ್ನು ಸಮಾಜದ ಮುಖ್ಯ ವಾಹಿನಿಗೆ ತರಬೇಕೆಂದು ಹೋರಾಟ ಮಾಡಿದವರಲ್ಲಿ ಅಂಬೇಡ್ಕರ್ ಅವರು ಅಗ್ರಗಣ್ಯರು. ಭಾರತೀಯ ಸಮಾಜವನ್ನು ತಲಸ್ಪರ್ಶಿಯಾಗಿ ಅಧ್ಯಯನ ಮಾಡಿದ ಬಾಬಾ ಸಾಹೇಬರು ಜಾತಿ ಮತ್ತು ವರ್ಣ ವ್ಯವಸ್ಥೆಯ ವಿರುದ್ಧ ವ್ಯವಸ್ಥಿತವಾಗಿ ಹೋರಾಟವನ್ನು ಮಾಡುತ್ತಾರೆ. ಜಾತಿ ಮತ್ತು ಅಸ್ಪೃಶ್ಯತೆ ಆಚರಣೆ ಸಮಾಜಕ್ಕೆ ಅಂಟಿದ ಬಹುದೊಡ್ಡ ಕಳಂಕವೆಂದು ಭಾವಿಸುತ್ತಾರೆ.

ಒಟ್ಟಾರೆ ಭಾರತದ ಪ್ರತಿಯೊಬ್ಬ ಪ್ರಜೆಗೂ, ಸಮಾಜದ ಕಟ್ಟ ಕಡೆಯ ವ್ಯಕ್ತಿಗೂ ಸಾಮಾಜಿಕ, ಧಾರ್ಮಿಕ, ರಾಜಕೀಯ, ಆರ್ಥಿಕ ಹಾಗೂ ಶೈಕ್ಷಣಿಕ ಹಕ್ಕುಗಳನ್ನು ಸಂವಿಧಾನದ ಮೂಲಕ ಒದಗಿಸಿಕೊಟ್ಟ ಮಹಾನ್ ಚೇತನ, ಮಹಾನ್ ಮಾನವತವಾದಿ, ಆಧುನಿಕ ಮೀಸಲಾತಿಯ ಹೋರಾಟಗಾರ ಹಾಗೂ ಸಾಮಾಜಿಕದ ನ್ಯಾಯದ ರೂವಾರಿಯಾಗಿ ಕಾಣಸಿಗುತ್ತಾರೆ. ಹೀಗಾಗಿ ವಿಶ್ವ ಮಾನ್ಯತೆಯನ್ನು ಪಡೆದ ನಮ್ಮ ಸಂವಿಧಾನವು ಆಧುನಿಕ ಭಾರತದಲ್ಲಿ ಸಮಾನತೆಯನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಒಂದು ಮಹತ್ವದ ಮೈಲುಗಲ್ಲಾಗಿದೆ.

## ಪರಮಾರ್ಶನ ಗ್ರಂಥಗಳು:


1. ಮಹೇಶ್ ಸಿ. ಕೆ. , (2000), ಅಂಬೇಡ್ಕರ್ ಮತ್ತು ಮೀಸಲಾತಿ ವರ್ಗೀಕರಣ, ವಿಮೋಚನ ಪ್ರಕಾಶನ, ಚಿತ್ರದುರ್ಗ.
2. ಲಿಂಗಪ್ಪ ಹೆಚ್., (2005), ಡಾ. ಬಿ.ಆರ್. ಅಂಬೇಡ್ಕರ್ ರವರ ಸಾಮಾಜಿಕ–ಆರ್ಥಿಕ–ರಾಜಕೀಯ ನೆಲೆಗಳು, ರಶ್ಮಿ ಪ್ರಕಾಶನ, ಬೆಂಗಳೂರು.
3. ಅಂಬೇಡ್ಕರ್ ಬಿ. ಆರ್. , (2012), ಡಾಕ್ಟರ್ ಬಾಬಾಸಾಹೇಬ್ ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.
4. ಮಹೇಶ್ ಸಿ. ಕೆ. , (2002), ಮೀಸಲಾತಿ ಮತ್ತು ಭವಿಷ್ಯದ ಪಥಗಳು, ವಿಮೋಚನ ಪ್ರಕಾಶನ, ಚಿತ್ರದುರ್ಗ.
5. ಸಣ್ಣರಾಮ, (2008), ಅಂಬೇಡ್ಕರ್ ಮತ್ತು ಮೀಸಲಾತಿ, ಪ್ರೀತಮ್ ಪ್ರಕಾಶನ, ಶಿವಮೊಗ್ಗ.
6. ಜಾಫೆಟ್ ಎಸ್. , (2015), ಅಂಬೇಡ್ಕರ್ ಚಿಂತನೆಗಳ ಪ್ರವೇಶಿಕೆ, ಸಂಚಾಲಕರು ಡಾ. ಬಿ.ಆರ್. ಅಂಬೇಡ್ಕರ್ 125ನೇ ಜಯಂತಿಯ ವರ್ಷಾಚರಣೆಯ ಅಂತರಾಷ್ಟ್ರೀಯ ಸಮ್ಮೇಳನಾ ಆಯೋಜನಾ ಸಮಿತಿ, ಬೆಂಗಳೂರು.
7. ನಾಗಮೋಹನದಾಸ್ ಎಚ್. ಎನ್. , (2018), ಸಂವಿಧಾನ ಓದು, ಸಹಯಾನ, ಕೆರೆಕೋಣ.
8. ಅಂಜನಪ್ಪ ಕೆ. , (2007), ಅಂಬೇಡ್ಕರ್ ಮತ್ತು ಅಸ್ಪೃಶ್ಯತೆ, ಡಾ. ಬಿ.ಆರ್. ಅಂಬೇಡ್ಕರ್ ಅಧ್ಯಯನ ಕೇಂದ್ರ, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ.
9. ಇಂದಿರ ಕೃಷ್ಣಪ್ಪ (ಸಂ), (2010), ಪ್ರೊಫೆಸರ್ ಬಿ ಕೃಷ್ಣಪ್ಪನವರ ಬರಹಗಳು ಮತ್ತು ಭಾಷಣಗಳು: ಭಾಗ–2, ಪ್ರೊ. ಬಿ. ಕೃಷ್ಣಪ್ಪ ಟ್ರಸ್ಟ್, ಬೆಂಗಳೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4. 0 International License.